**ದಿನಾಂಕಃ 21–11–2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ:–**

6. ನಾನು ಪ್ರಕರಣದ ತನಿಖೆ ವಹಿಸಿಕೊಂಡಾಗ ಪಿರ್ಯಾದನ್ನು ಮತ್ತು ಅಲ್ಲಿಯವರೆಗೆ ಆಗಿದ್ದ ತನಿಖೆಯ ಕಾಗದ ಪತ್ರವನ್ನು ಪರಶೀಲನೆ ಮಾಡಿದ್ದೇನಾ ಎಂದರೆ ನಾನೇ ಈ ಪ್ರಕರಣದಲ್ಲಿ ದೂರು ಪಡೆದು ಪ್ರ.ವ.ವ ನೊಂದಾವಣಿ ಮಾಡಿರುತ್ತೇನೆ. ತಾತ್ಕಾಲಿಕ ಗುತ್ತಿಗೆ ಆದೇಶವನ್ನು ಯಾವ ದಿನಾಂಕದಂದು ನೀಡಿದ್ದರು ಎಂದು ನಾನು ಪಿರ್ಯಾದಿಯನ್ನು ಕೇಳಿದ್ದೆನಾ ಎಂದು ನೆನಪಿಲ್ಲ. ತಾತ್ಕಾಲಿಕ ಗುತ್ತಿಗೆ ಆದೇಶದ ಪ್ರತಿಯನ್ನು ಪಿರ್ಯಾದನ್ನು ಕೊಟ್ಟಾಗ ನನ್ನ ಮುಂದೆ ಹಾಜರುಪಡಿಸಿಲ್ಲ. ತಾತ್ಕಾಲಿಕ ಗುತ್ತಿಗೆ ಆದೇಶವನ್ನು ಯಾರು ಕೊಟ್ಟಿದ್ದರು ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಈ ಪ್ರಕರಣದಲ್ಲಿ ನಾನು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿಲ್ಲ. ನಾನು ಪ್ರಕರಣದ ತನಿಖೆಯನ್ನು ಮುಂದಿನ ತನಿಖಾಧಿಕಾರಿಗೆ ವಹಿಸುವವರೆಗೆ ತಾತ್ಕಾಲಿಕ ಗುತ್ತಿಗೆ ಆದೇಶ ಯಾವಾಗ ಮತ್ತು ಯಾರು ಮಾಡಿದ್ದರು ಎಂದು ನಾನು ಖಾತ್ರಿ ಮಾಡಿಕೊಂಡಿರುವುದಿಲ್ಲ. ಪಿರ್ಯಾದಿಗೆ ಹಾಲು ಸರಬರಾಜು ಮಾಡುವ ಯಾವುದೇ ತಾತ್ಕಾಲಿಕ ಗುತ್ತಿಗೆ ಆದೇಶ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ಕಾರದಿಂದ ಯಾವುದೇ ಸಂಸ್ಥೆಗಳಿಗೆ ಹಂಚುವಂತಹ ವಸ್ತುಗಳನ್ನು ಹಂಚುವ ಪೂರ್ವದಲ್ಲಿ ಗುತ್ತಿಗೆ ಆದೇಶ ಅಥವಾ ಅನುಮತಿ ಇರಬೇಕು ಎಂದರೆ ನನಗೆ ಮಾಹಿತಿ ಇಲ್ಲ. ಸರ್ಕಾರದಿಂದ ನೀಡುವ ವಸ್ತುಗಳನ್ನು ಅನಧೀಕೃತ ವ್ಯಕ್ತಿಗಳು ಸರಬರಾಜು ಅಥವಾ ಸಾಗಣೆ ಮಾಡಲು ಬರುವುದಿಲ್ಲ. ಅನಧಿಕೃತ ವ್ಯಕ್ತಿ ಆ ರೀತಿ ಸರಬರಾಜು ಮತ್ತು ಸಾಗಣೆ ಬಗ್ಗೆ ಬೇಟಿ ಮಾಡಿದಾಗ ಸಂಬಂಧಪಟ್ಟ ಅಧಿಕಾರಿ ಜಾಗೃತೆಯಿಂದ ಇರಬೇಕು ಎಂದರೆ ಹೌದು.

7. ನಂದಿನಿ ಹಾಲು ಒಕ್ಕೂಟದಿಂದ ಪಿರ್ಯಾದುದಾರನಿಗೆ ಹಾಲು ಪುಡಿ ಸರಬರಾಜು ಮಾಡಲು ಅನುಮತಿ ಇತ್ತಾ ಎಂದು ಗೊತ್ತಿಲ್ಲ. ಯಾವುದೇ ವ್ಯಕ್ತಿ ಸಾಮಗ್ರಿಯನ್ನು ಪೂರೈಸಿ ಬಿಲ್ಲನ್ನು ಮಂಜೂರು ಮಾಡಿಸಿಕೊಳ್ಳಬೇಕಾದರೆ ಏನೆಲ್ಲಾ ಪ್ರಕ್ರಿಯೇ ಇದೆ ಎಂದರೆ ನನಗೆ ಗೊತ್ತಿಲ್ಲ. ಕೆಎಮ್ ಎಫ್ ಸಂಸ್ಥೆಯಿಂದ ಹಾಲು ಪುಡಿ ಸರಬರಾಜು ಮಾಡಲು ನಿಗದಿತ ನಮೂನೆ ಮತ್ತು ಸ್ವೀಕೃತಿಯನ್ನು ನಿಗದಿಪಡಿಸಿದಾರೆ ಎಂದು ನನಗೆ ಗೊತ್ತಿಲ್ಲ. ಕೆ ಎಮ್ ಎಪ್ ಸಂಸ್ಥೆಯ ನಿಗದಿತ ನಮೂನೆ ಮತ್ತು ಸ್ವೀಕೃತಿ ಇಲ್ಲದೇ ಬಿಲ್ಲನ್ನು ಮಂಜೂರು ಮಾಡಲು ಬರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಪಿರ್ಯಾದುದಾರ ಸರಬರಾಜು ಮಾಡಿದ್ದೇನೆ ಎಂದು ಹೇಳಿರುವ

ಶಾಲೆಗಳ ಮುಖ್ಯೋಪಾಧ್ಯಾಯರ ಮತ್ತು ಕೆ ಎಮ್ ಎಫ್ ಅಧಿಕಾರಿಯವರ ಹೇಳಿಕೆಗಳನ್ನು ನಾನು ಪಡೆದಿಲ್ಲ. ಫಿರ್ಯಾದಿ ಆರೋಪಿಗೆ ನೀಡಿದ್ದೇನೆ ಎಂದು ಹೇಳಿರುವ ಸ್ವೀಕೃತಿ ಪತ್ರಗಳನ್ನು ನಾನು ಪರಿಶೀಲಿಸಿಲ್ಲ. ಆ ಸ್ವೀಕೃತಿ ಪತ್ರವನ್ನು ನಾನು ನೋಡಿದ್ದೆನಾ ಎಂದು ನೆನಪಿಲ್ಲ. ನಾನು ಉದ್ದೇಶಪೂರಕವಾಗಿ ವಿವಾದಿತ ಕಾಗದ ಪತ್ರಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಆ ಸ್ವೀಕೃತಿ ಪತ್ರಗಳನ್ನು ಪಡೆದು ಪರಿಶೀಲಿಸುವ ಜವಾಬ್ದಾರಿ ನನಗೆ ಇತ್ತು ಎಂದರೆ ಸರಿಯಲ್ಲ.

8. ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ಡಿ.ಇ ಸಂಖ್ಯೆ 71/2016 ರಲ್ಲಿ ನಾನು ಇದೇ ಆರೋಪಿ ವಿರುದ್ಧ ಈ ಪ್ರಕರಣದ ಬಗ್ಗೆ ಸಾಕ್ಷ್ಯ ನೀಡಿದ್ದೆನೆ ಎಂದರೆ ಹೌದು. ಈಗ ತೋರಿಸಿದ ನೋಟರಿಕೃತ ನಕಲು ನಾನು ಆ ಪ್ರಕರಣದಲ್ಲಿ ನೀಡಿರುವ ಸಾಕ್ಷ್ಯ ಆಗಿದೆ ಎಂದರೆ ಹೌದು. (ಅದು 3 ಹಾಳೆ ಇದೆ). ಅದನ್ನು ನಿಡಿ-31 ಎಂದು ಗುರುತಿಸಲಾಯಿತು. ದಿನಾಂಕ 16.09.2013 ರಲ್ಲಿ ನಾನು ಫಿರ್ಯಾದನ್ನು ನೊಂದಾಯಿಸಿದ್ದೇನೆ ಎಂದರೆ ಹೌದು. ಫಿರ್ಯಾದುದಾರ ಮೊಬೈಲ್ ನಲ್ಲಿ ಸಂಭಾಷಣೆಯನ್ನು ಆರೋಪಿ ಜೊತೆ ಫಿರ್ಯಾದನ್ನು ಕೊಡುವುದಕ್ಕೆ ಮೊದಲು ಧ್ವನಿ ಮುದ್ರಣ ಮಾಡಿಕೊಂಡಿದ್ದ. ಫಿರ್ಯಾದನ್ನು ಕೊಡಲು ಏಕೆ ವಿಳಂಬ ಆಗಿದೆ ಎಂದು ನಾನು ಫಿರ್ಯಾದುದಾರರನ್ನು ಕೇಳಿಲ್ಲ. ನಾನು ಸಂಭಾಷಣೆ ಧ್ವನಿ ಮುದ್ರಣ ಮಾಡಿಕೊಂಡಿದ್ದ ಮೊಬೈಲ್ ಅನ್ನು ಅಥವಾ ಅದರ ಮೆಮೋರಿ ಕಾರ್ಡನ್ನು ಜಪ್ತು ಮಾಡಿಲ್ಲ. ದಿನಾಂಕ 10.09.2013 ರಂದು ಮಾಡಿಕೊಳ್ಳಲಾಗಿದೆ ಎಂದು ಹೇಳಿರುವ ಧ್ವನಿ ಮುದ್ರಣಕ್ಕೆ ಸಂಬಂಧಿಸಿದಂತೆ ನಾನು ಕಲಂ 65(ಬಿ) ಪ್ರಮಾಣ ಪತ್ರ ಪಡೆದಿಲ್ಲ. ಮೊಬೈಲ್ ಮತ್ತು ಮೆಮೋರಿ ಕಾರ್ಡ ಜಪ್ತು ಮಾಡಿದರೆ ಸತ್ಯ ಹೊರ ಬರುತ್ತದೆ ಎಂದು ಉದ್ದೇಶಪೂರ್ವಕವಾಗಿ ನಾನು ಅವುಗಳನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಹಿಂಬಾಲಿಸುವಾಗ ಅಥವಾ ಪ್ರಾಯೋಗಿಕ ಪಂಚನಾಮೆ ಮಾಡುವಾಗ ಮತ್ತು ಟ್ರ್ಯಾಪ್ ಪಂಚನಾಮೆ ಮಾಡುವಾಗ ವಿಡಿಯೋ ಅಥವಾ ಆಡಿಯೋ ರೆಕಾರ್ಡಿಂಗ್ ಮಾಡಿಕೊಂಡಿಲ್ಲ. ಆ ಸಮಯದಲ್ಲಿ ನಮ್ಮ ಠಾಣೆಯಲ್ಲಿ ವಿಡಿಯೋ ಆಡಿಯೋ ಮಾಡಿಕೊಳ್ಳಲು ಸಲಕರಣೆ ಇರಲಿಲ್ಲ, ಛಾಯಾಚಿತ್ರ ತೆಗೆಯಲು ಕ್ಯಾಮೆರಾ ಇತ್ತು. ಛಾಯಾಚಿತ್ರ ತೆಗೆದಿರುವ ಬಗ್ಗೆ ನೆಗೆಟಿವ್ ಹಾಜರುಪಡಿಸಿಲ್ಲ. ಛಾಯಾಚಿತ್ರದ ಬಗ್ಗೆ ನಾನು ಕಲಂ 65(ಬಿ) ಪ್ರಮಾಣ ಪತ್ರ ಹಾಜರುಪಡಿಸಿಲ್ಲ.

ಛಾಯಾಚಿತ್ರಗಳನ್ನು ಪ್ರಕರಣದ ಅನುಕುಲಕ್ಕಾಗಿ ನಾನೇ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

9. ತನಿಖೆಗೆ ಉಪಯೋಗಿಸಿದ ಫಿನಾಪ್ತಲಿನ್ ಪುಡಿ ಮತ್ತು ಸೋಡಿಯಮ್ ಕಾರ್ಬೋನೇಟ್ ಪುಡಿಯನ್ನು ಇಲಾಖೆ ಪೂರೈಸಿತ್ತು ನಾನು ಅದನ್ನು ಖರೀದಿ ಮಾಡಿರುವುದಿಲ್ಲ. ಯಾವಾಗ ಅದನ್ನು ಇಲಾಖೆ ಖರೀದಿ ಮಾಡಿತ್ತು ಮತ್ತು ನಮ್ಮಲ್ಲಿ ದಾಸ್ತಾನು ಇತ್ತು ಎಂಬ ಬಗ್ಗೆ ದಾಖಲಾತಿ ನಿರ್ವಹಿಸಿದ್ದೆವಾ ಎಂದರೆ ನೆನಪಿಲ್ಲ. ವಹಿಸಿಕೊಡುವ ಮತ್ತು ಟ್ರ್ಯಾಪ್ ಪಂಚನಾಮೆ ಕಾಲದಲ್ಲಿ ನಮ್ಮ ಠಾಣೆಯಲ್ಲಿ ಫಿನಾಪ್ತಲಿನ್ ಪುಡಿ ಮತ್ತು ಸೋಡಿಯಮ್ ಕಾರ್ಬೋನೇಟ್ ಪುಡಿ ಲಭ್ಯ ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿನಾಪ್ತಲಿನ್ ಪುಡಿ ಸವರಿದ ಸದಾನಂದ ನಾಯಕ್ ರವರ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಿರುವುದಿಲ್ಲ. ಪ್ರಾಯೋಗಿಕ ಪಂಚನಾಮೆಯಲ್ಲಿ ಮುಖ್ಯ ಪೇದೆ ಸದಾನಂದ ನಾಯಕ್ ರವರ ಸಹಿ ಇಲ್ಲ ಎಂದರೆ ಹೌದು. ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಸದಾನಂದ ನಾಯಕ್ ಬಂದಿದ್ದರು. ಸದಾನಂದ ನಾಯಕ್ ರವರ ಕೈಗಳನ್ನು ಫಿನಾಪ್ತಲಿನ್ ಪುಡಿ ಸವರಿದ ನಂತರ ಕೈಯಿಂದ ತೊಳೆದ ಬಗ್ಗೆ ಬರೆದಿಲ್ಲ ಎಂದರೆ ಸಾಬೂನಿನಿಂದ ತೊಳೆದುಕೊಂಡ ಬಗ್ಗೆ ಬರೆಯಲಾಗಿದೆ. ಆ ರೀತಿ ಬರೆದಿರುವುದಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದಾನಂದ ನಾಯಕ ಅಥವಾ ಯಾವುದೇ ಪಂಚರು ನಾನು ಹೇಳಿದ ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ.

10. ಟ್ರ್ಯಾಪ್ ಪಂಚನಾಮೆಗೆ ಹೋಗುವಾಗ ಏನೇನು ಉಪಕರಣಗಳನ್ನು ತೆಗೆದುಕೊಂಡು ಹೋದೆವು ಎಂದು ಪಟ್ಟಿ ತಯಾರು ಮಾಡಿರುವುದಿಲ್ಲ. ಏನು ಉಪಕರಣಗಳನ್ನು ತೆಗೆದುಕೊಂಡು ಹೊಗಿದ್ದೆವು ಎಂದರೆ ನನ್ನ ಬಾಯಿ ಮಾತಿನ ಹೇಳಿಕೆ ಬಿಟ್ಟರೆ ಬೇರೆ ದಾಖಲಾತಿ ಇಲ್ಲ ಎಂದರೆ ಸರಿಯಲ್ಲ. ಆ ದಿನ ನಾವು ಕಾರವಾರವನ್ನು ಸಂಜೆ 4.35 ಗಂಟೆಗೆ ಬಿಟ್ಟೆವು. ಒಂದೇ ವಾಹನದಲ್ಲಿ ನಾವೆಲ್ಲ ಹೋದೆವು. ಸಂಜೆ 6.15 ಗಂಟೆಗೆ ಕುಮಟಾ ತಲುಪಿದೆವು. ತಾಲೂಕು ಪಂಚಾಯತಿ ಕಚೇರಿಗೆ ಸಂಜೆ 6.15 ಗಂಟೆಗೆ ತಲುಪಿದೆವು. ನಾವು ಅಲ್ಲಿಗೆ ನೇರವಾಗಿ ಹೋದೆವು. ಅಲ್ಲಿ ಎಷ್ಟು ಸಮಯ ನಾವು ಆರೋಪಿಯ ಕಚೇರಿ ಬಳಿ ಕಾಯುತ್ತಿದ್ದೆವು ಎಂದು ನೆನಪಿಲ್ಲ. ಆರೋಪಿಯ ಕಚೇರಿಯ ಅವರ ಕೊಠಡಿಯಿಂದ ನಾನು ನಿಂತಿದ್ದ ಸ್ಥಳ ಎಷ್ಟು ದೂರದಲ್ಲಿ ಇತ್ತು ಎಂದರೆ ನಾನು ಕೊಠಡಿ ಬಳಿ ಕಾಯುತ್ತಿರಲಿಲ್ಲ, ಸುಮಾರು ಆ

ಕಚೇರಿಯಿಂದ ಅರ್ಧ ಮುಕ್ಕಾಲು ಫರ್ಲಾಂಗ್ ದೂರದಲ್ಲಿ ಇದ್ದೆವು. ನನ್ನ ಸಂಗಡ ನಾನು, ಪಂಚ–2, ಸಿಬ್ಬಂದಿ ಇದ್ದರು. ಎಲ್ಲಾ ಆರಕ್ಷಕ ಸಿಬ್ಬಂದಿ ನನ್ನ ಜೊತೆ ಇದ್ದರು. ನಾನು ರಸ್ತೆ ಪಕ್ಕದಲ್ಲಿ ನಿಂತಿದ್ದೆನು. ನಾನು ನಿಂತಿದ್ದ ಸ್ಥಳದಿಂದ ಆರೋಪಿಯ ಕೊಠಡಿ ಮತ್ತು ಆರೋಪಿಯ ಕಚೇರಿಯ ಸೈಕಲ್ ಸ್ಟ್ಯಾಂಡ್ ದೂರದಿಂದ ಕಾಣುತ್ತಿತ್ತು. ಆ ರೀತಿ ಕಾಣುತ್ತಿತ್ತು ಎಂದು ಟ್ರ್ಯಾಪ್ ಪಂಚನಾಮೆಯಲ್ಲಿ ಬರೆದಿಲ್ಲ. ಆದರೆ ದ್ವಿಚಕ್ರ ವಾಹನ ನಿಲ್ಲಿಸುವ ಸ್ಟ್ಯಾಂಡ್ ಬಳಿ ಒಬ್ಬ ವ್ಯಕ್ತಿ ಬಂದು ಏನೋ ಮಾತನಾಡಿ ತನ್ನ ಹೀರೊ ಹೊಂಡ ಮೋಟರ್ ಸೈಕಲ್ ನಲ್ಲಿ ಹೊರಟು ಹೋಗಿದ್ದು ಕಾಣಿಸಿತ್ತು. ಪಿರ್ಯಾದಿ ಆರೋಪಿಯ ಕಚೇರಿಯ ಮುಂಭಾಗದಲ್ಲಿ ಸನ್ನೆ ಮಾಡಿ ಕರೆದರು. ಪಿರ್ಯಾದಿ ಸನ್ನೆ ಮಾಡಲು ಉಪಯೋಗಿಸಿದ ಕರವಸ್ತ್ರವನ್ನು ಜಪ್ತು ಮಾಡಿರುವುದಿಲ್ಲ. ಪಂಚನಾಮೆಯಲ್ಲಿ ಸದರಿ ಸ್ಟ್ಯಾಂಡ್ ಹತ್ತಿರ ಆ ವ್ಯಕ್ತಿ ನಿಂತಿದ್ದನ್ನು ನಾನು ನೋಡಿದ್ದಾಗಿ ಬರೆದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿ ಕಚೇರಿಯಲ್ಲಿ ಬೇರೆ ಸಿಬ್ಬಂದಿ ಇದ್ದರಾ ಎಂದರೆ ಕಚೇರಿ ಮುಂಭಾಗದಲ್ಲಿ ಅವರ ಕಚೇರಿಯ ಸಿಬ್ಬಂದಿ ಯಾರೂ ಕಾಣಿಸಲಿಲ್ಲ. ಪಿರ್ಯಾದಿಯು ಆರೋಪಿಗೆ ಹಣ ಕೊಡುವುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ.

11. ತಾಲೂಕು ಪಂಚಾಯತಿ ಕಚೇರಿಯಿಂದ ಆರೋಪಿಯನ್ನು ನಾವು ಹಿಂಬಾಲಿಸಲು ಪ್ರಾರಂಭಿಸಿದ ಸಮಯವನ್ನು ಪಂಚನಾಮೆಯಲ್ಲಿ ನಮೂದಿಸಿಲ್ಲ ಆದರೆ ಸಂಜೆ 6.30 ಗಂಟೆ ನಂತರ ಹಿಂಬಾಲಿಸಿರುತ್ತೇನೆ. ಹಿಂಬಾಲಿಸಲು ಪ್ರಾರಂಭಿಸಿದಾಗ ಸ್ವಲ್ಪ ಮಸುಕಿನ ಬೆಳಕು ಇತ್ತು. ನಮ್ಮ ಒಂದು ಇಲಾಖಾ ವಾಹನದಲ್ಲಿ ಆರೋಪಿಯನ್ನು ಹಿಂಬಾಲಿಸಿದೆವು. ಪಿರ್ಯಾದಿ ಮತ್ತು ಪಂಚರು ನಮ್ಮ ವಾಹನದಲ್ಲಿ ಇದ್ದರಾ ಎಂದರೆ ಹೌದು. ಆರೋಪಿಯನ್ನು ರಾತ್ರಿ 8.30 ಯಿಂದ 8.40 ರ ಸಮಯದಲ್ಲಿ ಹಿಡಿದಿರುತ್ತೇನೆ. ಸುಮಾರು ಎರಡು ತಾಸು ಆರೋಪಿಯನ್ನು ಹುಡುಕಾಡಿ ಹಿಂಬಾಲಿಸಿದ್ದೇವೆ. ಕುಮಟಾ ಪಟ್ಟಣದಲ್ಲಿ ಗಂಟೆಗೆ 30 ಕಿ.ಮೀ ವೇಗದಲ್ಲಿ ಎರಡು ಗಂಟೆ ಕಾಲ ಚಾಲನೆ ಮಾಡಿದರೆ ಸುಮಾರು 60 ಕಿ.ಮೀ ಕ್ರಮಿಸುತ್ತೇವೆ ಎಂದರೆ ಮಾಹಿತಿ ಇಲ್ಲ. ಕಾರವಾರದಿಂದ ನಾವು ಹೊರಟಾಗ ಎಷ್ಟು ಕಿ.ಮೀ ನಮ್ಮ ವಾಹನ ಅಲ್ಲಿಯವರೆಗೆ ಓಡಿತ್ತು ಎಂದು ನಾನು ಬರೆದುಕೊಳ್ಳುವುದಿಲ್ಲ ನಮ್ಮ ಚಾಲಕ ಬಹುಶಃ ಅದನ್ನು ಬರೆದುಕೊಂಡಿರಬಹುದು. ನಾವು ಸ್ಥಳ ಮುಟ್ಟಿದ ಮೇಲೆ ಎಷ್ಟು ಕಿ.ಮೀ ಓಡಿತ್ತು ಎಂದು ಬರೆದುಕೊಳ್ಳುತ್ತೇವೆ ಎಂದರೆ ನಾನು ಬರೆದುಕೊಳ್ಳುವುದಿಲ್ಲ. ಎರಡು ತಾಸು ಆರೋಪಿಯನ್ನು ಹಿಂಬಾಲಿಸಿದಾಗ ಆರೋಪಿ ನಮಗೆ ಕಾಣುತ್ತಿದ್ದನಾ ಎಂದರೆ ನಾವು ಹಿಂಬಾಲಿಸಿ ಹೊದೆವು

ಆರೋಪಿ ತಪ್ಪಿಸಿಕೊಂಡ ನಂತರ ಆರೋಪಿ ಕಾಣಲಿಲ್ಲ, ಆರೋಪಿಯನ್ನು ನಾವು ಆಗ ಹುಡುಕಾಡಿದೆವು. ಇವೆಲ್ಲಾ ವಿಷಯವನ್ನು ಟ್ರ್ಯಾಪ್ ಪಂಚನಾಮೆಯಲ್ಲಿ ಬರೆದಿಲ್ಲ. ಒಬ್ಬ ವ್ಯಕ್ತಿಯನ್ನು ಬೆನ್ನಟ್ಟಿ ಹೋಗುವುದು ಎಂದರೆ ಆ ವ್ಯಕ್ತಿಯ ಬೆನ್ನು ಹಿಂಬಾಲಿಸುವವರಿಗೆ ಕಾಣುತ್ತದೆ ಎಂದು ಅರ್ಥ ಎಂದರೆ ಹೌದು. ಪ್ರಾರಂಭದಲ್ಲಿ ಆರೋಪಿಯ ಬೆನ್ನು ಕಾಣುತ್ತಿತ್ತು. ಪ್ರಾರಂಭದಲ್ಲಿ ಮಾತ್ರ ಆರೋಪಿಯ ಬೆನ್ನು ಕಾಣುತ್ತಿತ್ತು ಎಂದು ಪಂಚಾಮೆಯಲ್ಲಿ ಬರೆದಿಲ್ಲ. ಪಂಚನಾಮೆಯಲ್ಲಿ ಬೆನ್ನಟ್ಟಿ ಹೋದೆವು ಎಂದು ಬರೆದಿದ್ದೇವೆ ಎಂದರೆ ಹೌದು. ನಾವು ಹಿಂಬಾಲಿಸಿ ಹೋದಾಗ ಆರೋಪಿ ಎಷ್ಟು ಸಮಯದವರೆಗೆ ಕಾಣಿಸಿದ ಎಂದು ನೆನಪಿಲ್ಲ. ಸುಮಾರು ಅರ್ಧ ಮುಕ್ಕಾಲು ಫರ್ಲಾಂಗ್ ಹಿಂಬಾಲಿಸುವವರೆಗೆ ಆರೋಪಿ ಬೆನ್ನು ಕಾಣುತ್ತಿತ್ತು. ಯಾವ ರಸ್ತೆಯಲ್ಲಿ ಆಗ ಹಿಂಬಾಲಿಸಿದೆವು ಎಂದರೆ ತಾಲೂಕು ಪಂಚಾಯತಿ ಕಚೇರಿ ಮುಂದೆ ರಸ್ತೆ ಇದೆ ಆ ರಸ್ತೆಯಲ್ಲಿ ಬೆನ್ನಟ್ಟಿದೆವು. ಆ ರಸ್ತೆ ಯಾವುದು ಎಂದು ಹೆಸರು ಹೇಳಲು ನೆನಪಿಲ್ಲ. ಆರೋಪಿಯ ಮನೆಯ ಹತ್ತಿರ ಒಂದು ದೇವಸ್ಥಾನ ಇದೆ ಆ ದೇವಸ್ಥಾನದ ಹತ್ತಿರ ಒಂದು ಕ್ರಾಸ್ ಇದೆ ಅಲ್ಲಿ ಆರೋಪಿ ಸಿಕ್ಕಿದ. ಅಲ್ಲಿ ಆರೋಪಿಯನ್ನು ಹಿಡಿದೆವು. ನಾವು ಆರೋಪಿಯನ್ನು ಹುಡುಕುತ್ತಾ ಬಂದು ಅಲ್ಲಿ ನಿಂತೆವು. ಆರೋಪಿ ಅಲ್ಲಿಗೆ ಬಂದಾಗ ಆರೋಪಿಯನ್ನು ಹಿಡಿದುಕೊಂಡೆವು. ಹುಡುಕುತ್ತಾ ಬಂದು ಅಲ್ಲಿ ನಿಂತಿದ್ದೆವು ಎಂದು ಪಂಚನಾಮೆಯಲ್ಲಿ ಬರೆದಿಲ್ಲ. ನಾವು ನಿಂತ ಜಾಗಕ್ಕೆ ಆರೋಪಿ ಬಂದ ಎಂದು ಪಂಚನಾಮೆಯಲ್ಲಿ ಬರೆದಿಲ್ಲ. ಟ್ರ್ಯಾಪ್ ಪಂಚನಾಮೆಯಲ್ಲಿ ಬರೆದಿರುವುದಕ್ಕೂ ಈಗ ನಾನು ಹೇಳಿದ ಸಾಕ್ಷ್ಯಕ್ಕೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಆ ಸ್ಥಳಕ್ಕೆ ನಾವು ಬರುವುದಕ್ಕೆ ಮೊದಲು ಆರೋಪಿಯನ್ನು ಎಲ್ಲಿ ಎಲ್ಲಿ ಹುಡುಕಾಡಿದೆವು ಮತ್ತು ಯಾವ ರಸ್ತೆಯಲ್ಲಿ ಹುಡುಕಾಡಿದೆವು ಎಂದರೆ ಇಡೀ ಕುಮಟಾ ಪಟ್ಟಣದಲ್ಲಿ ಹುಡುಕಾಡಿದೆವು ಯಾವ ಯಾವ ರಸ್ತೆ ಎಂದು ಹೇಳಲು ಆಗುವುದಿಲ್ಲ. ಯಾವ ಯಾವ ರಸ್ತೆಯಲ್ಲಿ ಆರೋಪಿಯನ್ನು ಹುಡುಕಿದೆವು ಎಂದು ಪಂಚನಾಮೆಯಲ್ಲಿ ಬರೆದಿಲ್ಲ. ಇಂತಹ ವ್ಯಕ್ತಿ ಎಲ್ಲಿ ಹೋದ ಎಂದು ರಸ್ತೆಯಲ್ಲಿ ನಾನು ವಿಚಾರಿಸಿದೆನಾ ಎಂದರೆ ನೆನಪಿಲ್ಲ. ಕುಮಟಾ ಪಟ್ಟಣದಲ್ಲಿ ಆ ಸಮಯದಲ್ಲಿ ಸಿಸಿಟಿವಿಗಳು ಸುಮಾರು ಕಡೆ ಇದ್ದವು ಎಂದರೆ ನಾನು ಗಮನಿಸಿಲ್ಲ. ನನ್ನ ತನಿಖೆಯಲ್ಲಿ ಯಾವುದೇ ಸಿಸಿಟಿವಿಯನ್ನು ಪರಿಶೀಲಿಸಿರುವುದಿಲ್ಲ. ಆರೋಪಿಯನ್ನು ಹಿಂಬಾಲಿಸಿ ಹೋದವು ಮತ್ತು ಅವನ ಮನೆ ಬಳಿ ಇರುವ ಕ್ರಾಸ್ ಬಳಿ ಹಿಡಿದೆವು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಎಲ್ಲಿಯೂ ಹಿಂಬಾಲಿಸದೇ ಇರುವ ಕಾರಣ ಪಂಚನಾಮೆಯಲ್ಲಿ ಅದರ ವಿವರ ಬರೆದಿಲ್ಲ ಎಂದರೆ ಸರಿಯಲ್ಲ.

ತಾಲೂಕು ಪಂಚಾಯತಿ ಕಚೇರಿಯಿಂದ ಆರೋಪಿಯನ್ನು ಹಿಡಿದ ಜಾಗ ಸುಮಾರು ಒಂದುವರೆ ಎರಡು ಕಿ.ಮೀ ದೂರದಲ್ಲಿದೆ. ಬೈಕ್ ಅಥವಾ ಜೀಪ್ ನಲ್ಲಿ ಹೋದರೆ 5 ರಿಂದ 10 ನಿಮಿಷದಲ್ಲಿ ಅಲ್ಲಿಗೆ ತಲುಪಬಹುದು ಎಂದರೆ ಹೇಳಲು ಆಗುವುದಿಲ್ಲ.

12. ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಅಕ್ಕಪಕ್ಕದಲ್ಲಿ ಸಾಕಷ್ಟು ಮನೆಗಳಿಗೆ ಎಂದರೆ ನೆನಪಿಲ್ಲ. ಆರೋಪಿಯನ್ನು ಹಿಡಿದ ಸ್ಥಳದಲ್ಲಿ ಸುಮಾರು ಅರ್ಧ ಗಂಟೆ ಇದ್ದೆವು. ಆಗ ನಮ್ಮನ್ನು ಹೊರತುಪಡಿಸಿ ಹೊರಗಿನವರು ಎಷ್ಟು ಜನ ಇದ್ದರು ಎಂದು ನೆನಪಿಲ್ಲ. ನೋಟುಗಳು ಬಿದ್ದಿದ್ದ ಜಾಗದಲ್ಲಿ ಮಸುಕು ಕತ್ತಲೆ ಇತ್ತು. ಆ ನೋಟುಗಳನ್ನು ಪಂಚ–1 ರವರ ಕಡೆಯಿಂದ ತೆಗೆಸಿದೆ. ಅಲ್ಲಿಂದ ಪ್ರವಾಸಿ ಮಂದಿರಕ್ಕೆ ಹೋದಾಗ ಪಂಚ–1 ನನ್ನ ಜೊತೆ ವಾಹನದಲ್ಲಿ ಬಂದರಾ ಎಂದು ನೆನಪಿಲ್ಲ. ಆರೋಪಿಯನ್ನು ವಶಕ್ಕೆ ತೆಗೆದುಕೊಂಡ ಜಾಗದಲ್ಲಿ ಪ್ರವಾಸಿ ಮಂದಿರಕ್ಕೆ ಒಂದು ವಾಹನದಲ್ಲಿ ಮತ್ತು ಒಂದು ಮೋಟರ್ ಸೈಕಲ್ ನಲ್ಲಿ ಹೋದೆವು. ಟ್ರ್ಯಾಪ್ ಪಂಚನಾಮೆಯ ಮೂರನೇ ಪುಟದಲ್ಲಿ ಕೊನೆಯ ಖಂಡಿಕೆಯಲ್ಲಿ ಆರೋಪಿಯ ಎರಡೂ ಕೈಗಳನ್ನು ಸಿಹೆಚ್ ಸಿ ರಾಮದಾಸ್ ಆಚಾರಿ ಹಾಗೂ ಸಿ ಪಿ ಸಿ ಚಂದನ್ ಮಾಂಜ್ರೇಕರ್ ಇವರಿಗೆ ಗಟ್ಟಿಯಾಗಿ ಹಿಡಿದುಕೊಂಡಿರುವಂತೆ ಅವರನ್ನು ಪಂಚರ ಸಮಕ್ಷಮ ಇಲಾಖಾ ವಾಹನದಲ್ಲಿ ಕುಳ್ಳರಿಸಿ ಕುಮಟಾ ಪ್ರವಾಸಿ ಮಂದಿರಕ್ಕೆ ಕರೆತರಲಾಯಿತು ಎಂದು ಬರೆಯಲಾಗಿದೆ ಎಂದರೆ ಹೌದು. ಪಂಚರು ಆಗ ಆ ಜೀಪ್ ನಲ್ಲಿ ಬಂದರಾ ಎಂದು ನೆನಪಿಲ್ಲ. ಪಂಚರು ಆಗ ಜೀಪ್ ನಲ್ಲಿಯೇ ಬಂದಿರುತ್ತಾರೆ ಎಂದು ಸಾಕ್ಷಿ ಪುನಃ ನುಡಿದಿರುತ್ತಾರೆ. ಪಂಚ–1 ರವರನ್ನು ಜೀಪ್ ಗೆ ಹತ್ತಿಸುವುದಕ್ಕೆ ಮೊದಲು ಪ್ರವಾಸಿ ಮಂದಿರಕ್ಕೆ ಹೋಗುವ ಮೊದಲು ಅವರ ಕೈಯನ್ನು ಸಾಬೂನಿನಿಂದ ತೊಳೆಸಿರುವುದಿಲ್ಲ. ಆ ಜೀಪ್ ನಲ್ಲಿ ಸದರಿ ದೇವಸ್ಥಾನ ಬಳಿ ಇದ್ದ ಪ್ರವಾಸಿ ಮಂದಿರಕ್ಕೆ ನಾನು, ನನ್ನ ಸಿಬ್ಬಂದಿ, ಆರೋಪಿ ಮತ್ತು ಪಂಚರು ಹೋದೆವು. ಪಿರ್ಯಾದಿ ಸಹ ಜೀಪ್ ನಲ್ಲಿ ಆಗ ನಮ್ಮ ಜೊತೆ ಬಂದ. ನನ್ನನ್ನು ಸೇರಿಸಿ ನಾವೆಲ್ಲರೂ 11 ರಿಂದ 12 ಜನ ಇದ್ದೆವು. ಚಾಲಕನನ್ನು ಬಿಟ್ಟು ನಾವು 11 ರಿಂದ 12 ಜನ ಇದ್ದೆವು. ಆ ಜೀಪ್ ನ ಆಸನದ ಸಾಮರ್ಥ್ಯ ಎಷ್ಟು ಎಂದು ನೆನಪಿಲ್ಲ. ಜೀಪ್ ನಲ್ಲಿ ನಾವು ಒತ್ತಿ ಕುಳಿತಿರಲಿಲ್ಲ, ಬಿಡಿಬಿಡಿಯಾಗಿ ಕುಳಿತಿದ್ದೆವು. ನನ್ನ ಸಿಬ್ಬಂದಿ 7 ಜನ ಇದ್ದರು. ಇಷ್ಟು ಜನ ಒಂದು ಜೀಪ್ ನಲ್ಲಿ ಹೋದಾಗ ತುಂಬಾ ನೂಕು ನುಗ್ಗಲು ಇರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪಂಚ–1 ರವರ ಕೈ ಆರೋಪಿಯ ಕೈಗೆ ತಾಗುವ ಎಲ್ಲಾ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಆ ದೇವಸ್ಥಾನದಲ್ಲಿ ಆಗಲಿ ಅಥವಾ

ಅಕ್ಕಪಕ್ಕದ ಮನೆ ಬಳಿ ಆಗಲಿ ರಾಸಾಯನಿಕ ಪ್ರಕ್ರಿಯೆ ಮಾಡಲು ತೊಂದರೆ ಇರಲ್ಲಿ ಎಂದರೆ ಸರಿಯಲ್ಲ. ದೇವಸ್ಥಾನದಿಂದ ಪ್ರವಾಸಿ ಮಂದಿರಕ್ಕೆ ತಲುಪಲು ನಮಗೆ ಸುಮಾರು 15 ನಿಮಿಷ ಹಿಡಿಯಿತು. ಪ್ರವಾಸಿ ಮಂದಿರದ ಕೊಠಡಿಯನ್ನು ನಾವು ಅನುಮತಿ ಪಡೆದು ಪಡೆದಿದ್ದೆವಾ ಎಂದು ನೆನಪಿಲ್ಲ. ಪ್ರವಾಸಿ ಮಂದಿರದಲ್ಲಿ ಪ್ರವಾಸಿ ಮಂದಿರದ ಸಿಬ್ಬಂದಿ ಎಷ್ಟು ಜನ ಇದ್ದರು ಎಂದು ನೆನಪಿಲ್ಲ. ಪ್ರವಾಸಿ ಮಂದಿರದಲ್ಲಿ ಯಾವುದೇ ಚಟುವಟಿಕೆ ಮಾಡಲು ಲೋಕೋಪಯೋಗಿ ಇಲಾಖೆಯ ಅನುಮತಿ ಪಡೆಯಬೇಕು ಎಂದರೆ ನನಗೆ ಗೊತ್ತಿಲ್ಲ. ಪ್ರವಾಸಿ ಮಂದಿರಕ್ಕೆ ನಾವು ಬೇಟಿ ಕೊಟ್ಟ ಬಗ್ಗೆ ಅಲ್ಲಿನ ವಹಿಯಲ್ಲಿ ನಾವು ನಮೂದಿಸಿಲ್ಲ. ಪ್ರವಾಸಿ ಮಂದಿರಕ್ಕೆ ಹೋಗಿದ್ದಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರವಾಸಿ ಮಂದಿರದ ಸಿಬ್ಬಂದಿಯ ರುಜುವನ್ನು ಟ್ರ್ಯಾಪ್ ಪಂಚನಾಮೆಯಲ್ಲಿ ಪಡೆದಿಲ್ಲ. ಪ್ರವಾಸಿ ಮಂದಿರದ ಸಿಬ್ಬಂದಿಯ ಹೇಳಿಕೆಯನ್ನು ಪಡೆದಿರುವುದಿಲ್ಲ. ಪ್ರವಾಸಿ ಮಂದಿರಕ್ಕೆ ಹೋಗಿದೆವು ಎಂದು ಹೇಳಿದ ಬಗ್ಗೆ ಬಾಯಿ ಮಾತಿನ ಹೊರತು ಬೇರೆ ಯಾವುದೆ ದಾಖಲಾತಿ ಇಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ವಕೀಲರು ಮುಂದುವರಿದ ಪಾಟಿ ಸವಾಲಿಗೆ ಸಮಯ ಕೋರಿದ್ದಾರೆ, ಯಾವುದೋ ಕಾಗದ ಪತ್ರ ಬೇಕಾಗಿದೆ ಎಂದು ಹೇಳಿದ್ದಾರೆ, ಯಾವ ಕಾಗದ ಪತ್ರ ಎಂದು ಹೇಳಿಲ್ಲ, ಈ ಸಾಕ್ಷಿಯ ವಿಚಾರಣೆ ದಿನಾಂಕ 15.03.2024 ರಲ್ಲಿ ಮುಗಿದಿರುತ್ತದೆ. ಹಿಂದೆ ಪಾಟಿ ಸವಾಲಿಗೆ ಅವಕಾಶ ನೀಡಿಲಾಗಿದೆ. ಆಗ ಪಾಟಿ ಸವಾಲು ಮಾಡಿರುವುದಿಲ್ಲ. ಅಭಿಯೋಜನೆ ತನ್ನ ಪರ ಸಾಕ್ಷ್ಯ ಮುಕ್ತಾಯ ಮಾಡಿದ ಮೇಲೆ ಪ್ರಕರಣ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಹೇಳಿಕೆಗೆ ಇದ್ದಾಗ ಆರೋಪಿ ಪರ ಕಲಂ 311 ರಅಡಿಯಲ್ಲಿ ಅರ್ಜಿ ಸಲ್ಲಿಸಿ ಸಾಕ್ಷಿಯನ್ನು ಪಾಟಿ ಸವಾಲಿಗೆ ಕರೆಯಿಸಬೇಕು ಎಂದು ಕೋರಿದ್ದು ಸದರಿ ಅರ್ಜಿಯನ್ನು ಪುರಸ್ಕರಿಸಲಾಗಿರುತ್ತದೆ. ಈಗ ಸಾಕ್ಷಿ ಹಾಜರಾಗಿದ್ದು ಯಾವುದೇ ಸಕಾರಣ ಇಲ್ಲದೇ ಪಾಟಿಸವಾಲನ್ನು ಮುಕ್ತಾಯ ಮಾಡಿಲ್ಲ. ಆದ್ದರಿಂದ ಆರೋಪಿ ಪರ ಸಮಯ ಕೋರಿರುವುದನ್ನು ತಿರಸ್ಕರಿಸಲಾಗಿದೆ. ಮುಂದುವರಿದ ಪಾಟಿ ಸವಾಲು ಮಾಡಿರುವುದಿಲ್ಲ ಆದ್ದರಿಂದ ಪಾಟಿ ಸವಾಲನ್ನು ಮುಕ್ತಾಯ ಮಾಡಿ ಸಾಕ್ಷಿಯನ್ನು ಬಿಡುಗಡೆ ಮಾಡಲಾಯಿತು).

**ಮರು ವಿಚಾರಣೆಃ ವಿ.ಸ.ಅ. ರವರಿಂದ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

**ಓ.ಹೇ.ಕೇ.ಸ.ಇ.**

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.